**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 384 ಯುಎನ್ಇ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 18.02.2022.

**ಸುತ್ತೋಲೆ**

ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿನ ಹೊಸ ಕಾಲೇಜುಗಳ / ಹೊಸ ಕೋರ್ಸುಗಳ / ಪ್ರವೇಶ ಸಂಖ್ಯೆಯ ಹೆಚ್ಚಳ / ಸಂಯೋಜನೆ ಮುಂದುವರಿಕೆ/ ನವೀಕರಣ / ಸ್ಥಳ ಬದಲಾವಣೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ, ಯುಜಿಸಿ ರೆಗ್ಯುಲೇಷನ್‌ಗಳಲ್ಲಿ ಆಯಾ ಕಾಲೇಜುಗಳು ಹೊಂದಿರಬೇಕಾದ ಕನಿಷ್ಠ ಜಮೀನಿನ ಅರ್ಹತೆಗಳ ಬಗ್ಗೆ ಕೆಲವು ಬದಲಾವಣೆಗಳು ಅಗತ್ಯವೆಂದು ಪರಿಗಣಿಸಿ, ಹೊಸ ಕಾಲೇಜುಗಳ / ಹೊಸ ಕೋರ್ಸುಗಳ / ಪ್ರವೇಶ ಸಂಖ್ಯೆಯ ಹೆಚ್ಚಳ / ಸಂಯೋಜನೆ ಮುಂದುವರಿಕೆ/ ನವೀಕರಣ / ಸ್ಥಳ ಬದಲಾವಣೆ ಇತ್ಯಾದಿಗಳ ಬಗ್ಗೆ ಸರ್ಕಾರದ ಸಹಮತಿಗಾಗಿ ವಿಶ್ವವಿದ್ಯಾಲಯಗಳು ಕಳುಹಿಸುವ ಪ್ರಸ್ತಾವನೆಗಳಲ್ಲಿ ಆಯಾ ಸಂಸ್ಥೆ ಕಾಲೇಜುಗಳು ಹೊಂದಿರಬೇಕಾದ ಕನಿಷ್ಠ ವಿಸ್ತೀರ್ಣದ ಜಮೀನಿನ ಮಿತಿಯನ್ನು ಕೆಳಗಿನಂತೆ ಪರಿಷ್ಕರಿಸಿ, ಸೂಕ್ತ ಮಾನದಂಡಗಳನ್ನು ಅನುಸರಿಸಲು ಸೂಚಿಸಿದೆ.

**ಮಾನದಂಡಗಳು:-**

1. The college/institution shall hold undisputed ownership and possession of land free from any or all encumbrances, measuring.
   a. Not less than 0.5 acres if it is located in mega cities.
   b. 1 acre if it is located in BMRDA, city corporations and district head quarters.
   c. 1.5 acres if it is located in Municipalities or taluk head quarters.
   d. 3 acres if it is any other rural areas.

   Provided that these requirements shall not apply to colleges already affiliated to the university prior to the date of notification of UGC. (Affiliation of colleges by the universities) Regulations 2009 and its amendments in 2012, **only if the existing programmes and intake of students are not altered.**

2. The registered society/trust in justified exceptional cases may be allowed to start the college for the 1st year of the programs in a readily available building, provided the institute should have the required land at the place proposed to establish the college on a permanent basis as per para 1 above.

3. In the bond to be executed by the registered society/trust it shall be mentioned that after the college is affiliated, the same will not be shifted to different location or will not be transferred to a different society, Trust, individual or a group of individuals without the prior approval of the University, provided in the new place proposed for shifting the college, the minimum land required under para 1 above shall be ensured.

ಸದರಿ ಜಮೀನು ಆಯಾ ಸಂಸ್ಥೆ ಅಥವಾ ಕಾಲೇಜಿನ ಹೆಸರಿನಲ್ಲಿದೆಯೇ ಎಂಬುದಕ್ಕೆ ಕೆಳಕಂಡ ದಾಖಲಾತಿಗಳನ್ನು ಕಳುಹಿಸತಕ್ಕದ್ದು:-

....2

1. ಸದರಿ ಜಮೀನಿನ ಪಹಣಿ ಅಥವಾ ಮುನಿಸಿಪಾಲಿಟಿ/ಕಾರ್ಪೋರೇಷನ್ ಗಳಿಂದ ಪಡೆದ ಇತ್ತೀಚಿನ ಖಾತಾ ನಕಲು

**ಅಥವಾ**

**ಸದರಿ ಜಮೀನನ್ನು ಸಂಸ್ಥೆಯ/ಕಾಲೇಜಿನ ಹೆಸರಿಗೆ ಪಡೆದುಕೊಂಡಿರುವ ಬಗ್ಗೆ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೊಂದಾಯಿತವಾಗಿರುವ (ಎ) ಕ್ರಯಪತ್ರ ಅಥವಾ (ಬಿ) 30 ವರ್ಷಗಳಿಂದ ಕಡಿಮೆ ಇಲ್ಲದ ಅವಧಿಯ ಲೀಸ್‌ಡೀಡ್ ಅಥವಾ (ಸಿ) ದಾನಪತ್ರ.**

ಹೊಸ ಕಾಲೇಜುಗಳ ಸ್ಥಾಪನೆ, ಹೊಸ ಕೋರ್ಸುಗಳ ಪ್ರಾರಂಭ, ಪ್ರವೇಶ ಸಂಖ್ಯೆಯ ಹೆಚ್ಚಳ, ಸಂಯೋಜನೆ ಮುಂದುವರಿಕೆ/ನವೀಕರಣ, ಸ್ಥಳ/ಹೆಸರು ಬದಲಾವಣೆ ಇತ್ಯಾದಿಗಳ ಸಂಯೋಜನೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂ. ಇಡಿ 29 ಯುಎನ್‌ಇ 2021, ದಿನಾಂಕ:12.02.2021 ಹಾಗೂ 16.02.2021ರ ಆದೇಶಗಳ ಜೊತೆಗೆ ಕಾಲೇಜುಗಳ ಜಮೀನಿನ ವಿಸ್ತೀರ್ಣದ ಕುರಿತಂತೆ ಮೇಲ್ಕಂಡ ಮಾನದಂಡಗಳನ್ನು ಯಥಾವತ್ತಾಗಿ ಪಾಲಿಸುವುದು. ಒಂದು ವೇಳೆ ಈ ಮಾನದಂಡಗಳಲ್ಲಿ ವಿಧಿಸಿದ ಜಮೀನಿನ ವಿಸ್ತೀರ್ಣ ಕನಿಷ್ಠ ಮಿತಿಗಿಂತ ಕಡಿಮೆ ಇದ್ದಲ್ಲಿ, **ಅಂತಹ ಪ್ರಸ್ತಾವನೆಯನ್ನು ಅನುಮೋದನೆಗೆ ಶಿಫಾರಸ್ಸು ಮಾಡತಕ್ಕದ್ದಲ್ಲ.**

Sheetal M. Hiremath

**(ಶೀತಲ್ ಎಂ. ಹಿರೇಮಠ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ-1)

ಗೆ:

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
2. ಕುಲಪತಿಗಳು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
3. ಕುಲಸಚಿವರು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
4. ಹಣಕಾಸು ಅಧಿಕಾರಿಗಳು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
5. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು.
6. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:-**

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, (ವಿಶ್ವವಿದ್ಯಾಲಯಗಳು-2), ಬಹುಮಹಡಿಗಳ ಕಟ್ಟಡ, ಬೆಂಗಳೂರು.